ನಿಮ್ಮೊಡನೆ

# ಬಿಸಿಯೂಟ ಮತ್ತು ಅಸ್ಪೃಶ್ಯತೆ

ಸರ್ಕಾರ ಬಿಸಿಯೂಟ ಬಹಿಷ್ಕಾರದ ಘಟನೆಗಳನ್ನು ಲಘುವಾಗಿ ನೋಡಬಾರದು. ಹಳ್ಳಿಗಳಲ್ಲಿ ಜಾತಿ ಸಾಮರಸ್ಯವನ್ನು ಕಾಪಾಡಬೇಕು ನಿಜ. ಆದರೆ ಎಲ್ಲದಕ್ಕೂ ಒಂದು ಮಿತಿಯಿದೆ.

ಮೈಸೂರು ತಾಲ್ಲೂಕಿನ ಕುಪ್ಪೇಗಾಲದಲ್ಲಿ ಕಳೆದ ಎರಡು ವಾರಗಳ ಕಾಲ ನಡೆದ 'ಬಿಸಿಯೂಟದ ವಿವಾದ' ನಾಗರಿಕತೆಯ ದಾರಿಯಲ್ಲಿ ನಮ್ಮ ಸಮಾಜ ಇನ್ನೂ ಸಾಗಬೇಕಾದ ದೂರ ಬಹಳವಿದೆ ಎನ್ನುವುದನ್ನು ಸ್ಪಷ್ಟಪಡಿಸಿದೆ. ಸರ್ಕಾರಿ ಶಾಲೆಗಳಲ್ಲಿ ಎಲ್ಲ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಬಡಿಸುವ ಯೋಜನೆ ಜಾರಿಗೆ ಬಂದು ಹಲವು ವರ್ಷಗಳೇ ಉರುಳಿವೆ. ವಿಷಾದದ ಸಂಗತಿಯೆಂದರೆ, ಬಿಸಿಯೂಟದ ಸಹಾಯಕರ ಜಾತಿಯನ್ನು ಗುರುತಿಸಿ, ಆ ಮೂಲಕ ಅಸ್ಪೃಶ್ಯತೆಯನ್ನು ಆಚರಿಸುವ ಕೊಳಕು ಮನಸ್ಸುಗಳು ಇನ್ನೂ ಜೀವಂತವಾಗಿವೆ! ಅದರಲ್ಲೂ ನೂರಾರು ಸಾಮಾಜಿಕ ಸುಧಾರಕರು ಬಂದು ಹೋಗಿ, ಅವರ ಲಕ್ಷಾಂತರ ಅನುಯಾಯಿಗಳು ಈಗಲೂ ಅವರನ್ನು ಸ್ಮರಿಸುತ್ತಿರುವ ನಮ್ಮ ರಾಜ್ಯದಲ್ಲಿ ಇನ್ನೂ ಅಸ್ಪೃಶ್ಯತೆ ಅದರ ಎಲ್ಲ ಕರಾಳ ರೂಪದೊಂದಿಗೆ ವಿಜೃಂಭಿಸುತ್ತಿರುವುದು ಏನನ್ನು ಸೂಚಿಸುತ್ತದೆ? ಅಣ್ಣ ಬಸವಣ್ಣ, ಸಂತ ಕನಕದಾಸರಿಂದ ಹಿಡಿದು ಇತ್ತೀಚಿನ ಮಹಾಕವಿ ಕುವೆಂಪುವರೆಗೆ ಎಲ್ಲ ಜ್ಞಾನಿಗಳೂ ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಯನ್ನು ಕಟುವಾಗಿ ಖಂಡಿಸಿದ್ದಾರೆ. ಹಾಗಿದ್ದೂ ನಾವು ಶಾಲೆಗಳಲ್ಲಿ ಸಹಭೋಜನವನ್ನು ಬಹಿಷ್ಕರಿಸುವ ನೆಪದಲ್ಲಿ ಅಸ್ಪೃಶ್ಯತೆಯನ್ನು ಆಚರಿಸುತ್ತಿರುವುದು ಈ ಸಮಾಜ ಸುಧಾರಕರಿಗೆ ಮಾಡುವ ಅವಮಾನವಲ್ಲದೆ ಬೇರೇನೂ ಅಲ್ಲ.

2002–03 ರಲ್ಲಿ ಮೊದಲ ಬಾರಿಗೆ ಉತ್ತರ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಸರ್ಕಾರಿ ಶಾಲೆಗಳ ಒಂದರಿಂದ ಐದನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಒದಗಿಸುವ ಯೋಜನೆ ಪ್ರಾಯೋಗಿಕವಾಗಿ ಜಾರಿಗೆ ಬಂತು. ಆಗ ಸರಕಾರದ ಮುಂದೆ ಇದ್ದದ್ದು ಹಿಂದುಳಿದ ಜಿಲ್ಲೆಗಳ ಹಳ್ಳಿಗಾಡಿನಲ್ಲಿ ಊಟಕ್ಕೆ ತತ್ವಾರವಾಗಿ ಶಾಲೆ ತಪ್ಪಿಸಿಕೊಳ್ಳುತ್ತಿದ್ದ ಮಕ್ಕಳು ಶಾಲೆಗೆ ಮರಳಿ ಬರುವಂತೆ ಮಾಡುವ ಗುರಿ ಮಾತ್ರ. ರಾಯಚೂರು, ಕೊಪ್ಪಳ, ಬೀದರ್, ಕಲ್ಬುರ್ಗಿ, ಬಳ್ಳಾರಿ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಲ್ಲಿ ಆರಂಭವಾದ ಯೋಜನೆಯಿಂದ ಸಾವಿರಾರು ಮಕ್ಕಳು ಮತ್ತೆ ಶಾಲೆಗೆ ಬರುವಂತಾಯಿತು. ಜತೆಗೆ, ಸೂಕ್ತ ಆಹಾರವಿಲ್ಲದೆ, ಪೋಷಕಾಂಶಗಳ ಕೊರತೆಯಿಂದ ಬಳಲಿದ್ದ ಲಕ್ಷಾಂತರ ಮಕ್ಕಳು ಮತ್ತು ಅವರ ಪೋಷಕರು ಶಾಲೆಯನ್ನು ಹೊಸ ದೃಷ್ಟಿಯಿಂದ ನೋಡುವಂತಾಯಿತು. 2003–04 ರಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳ ಸುಮಾರು 12 ಲಕ್ಷ ಶಾಲೆಗಳಲ್ಲಿ ಬಿಸಿಯೂಟದ ಯೋಜನೆ ಜಾರಿಗೆ ಬಂದಾಗ, ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯ ಗಾಳಿಯೂ ಬೀಸತೊಡಗಿತು.

ಆದರೆ ಈ ಮಧ್ಯೆ ಹಳ್ಳಿಗಾಡಿನಲ್ಲಿ ಜಾತೀಯತೆ ಮತ್ತು ಅಸ್ಪೃಶ್ಯತೆಯ ಬಿಸಿ ಎಷ್ಟಿದೆಯೆನ್ನುವುದೂ ಬಯಲಿಗೆ ಬಂತು. ಶಾಲೆಗಳಲ್ಲಿ ದಲಿತರನ್ನು ಅಡುಗೆ ಸಹಾಯಕಿಯರನ್ನಾಗಿ ನೇಮಿಸುವ ಸರ್ಕಾರದ ನಿರ್ಧಾರ, ಜಾತೀಯತೆಯ ವ್ಯಾಧಿಯ ಕರಾಳರೂಪ ದರ್ಶನ ಮಾಡಿತು. ಮೇಲ್ಜಾತಿಯ ಜನರ ಕೊಳಕು ಮನಸ್ಸು ಒಳಗೊಳಗೇ ಜಾತಿವ್ಯಾಧಿಯಿಂದ ನರಳುತ್ತಿರುವ ದಾರುಣ ಸತ್ಯ ಬಿಚ್ಚಿಕೊಂಡಾಗ, ಬಹುತೇಕ ಗ್ರಾಮಗಳಲ್ಲಿ ಅದನ್ನು ಆರೋಗ್ಯಕರವಾಗಿ ಎದುರಿಸುವ ಮನಸ್ಸುಗಳೂ ಎಚ್ಚರಗೊಂಡವು. ಈ ಹತ್ತು ವರ್ಷಗಳ ಅವಧಿಯಲ್ಲಿ ಹಲವಾರು ಹಳ್ಳಿಗಳು ಇಂತಹ ಜಾತಿವ್ಯಾಧಿಯಿಂದ ಮುಕ್ತಿ ಹೊಂದಿವೆ ಎನ್ನುವುದು ಸುಳ್ಳಲ್ಲ. ಆದರೆ ಇನ್ನೂ ಅಸ್ಪೃಶ್ಯತೆ ಆಚರಣೆ ಪೂರ್ಣವಾಗಿ ಮರೆಯಾಗಿಲ್ಲ ಎನ್ನುವುದು ಮೈಸೂರಿನ ಕುಪ್ಪೇಗಾಲದ ಘಟನೆಯಿಂದ ಸ್ಪಷ್ಟವಾಗಿದೆ.

ಶಾಲೆಗಳಲ್ಲಿ ಬಿಸಿಯೂಟದ ಯೋಜನೆ ಜಾರಿಗೆ ಬರುವುದಕ್ಕೆ ಮುನ್ನ ಆ ನಿಟ್ಟಿನಲ್ಲಿ ಕಾನೂನು ಹೋರಾಟವೂ ನಡೆದಿತ್ತು. 2001ರಲ್ಲಿ ನಾಗರಿಕ ಹಕ್ಕುಗಳ ಸಂಘಟನೆ (ಪಿಯುಸಿಎಲ್)ಯು ಜನರ ಆಹಾರದ ಹಕ್ಕನ್ನು ರಕ್ಷಿಸಲು ಸುಪ್ರೀಂಕೋರ್ಟಿನಲ್ಲಿ ಪಿಐಎಲ್ ಸಲ್ಲಿಸಿತ್ತು. ಸರ್ಕಾರಿ ಗೋದಾಮುಗಳಲ್ಲಿ ಕೊಳೆಯುತ್ತಿರುವ ಆಹಾರಧಾನ್ಯಗಳನ್ನು ಶಾಲಾ ಮಕ್ಕಳ ಬಿಸಿಯೂಟಕ್ಕೆ ಉಚಿತವಾಗಿ ಒದಗಿಸುವ ಪಿಯುಸಿಎಲ್‌ನ ವಾದವನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿತ್ತು. ಇವತ್ತು ಸರ್ಕಾರಿ ಶಾಲೆಗಳಲ್ಲಿ ದಲಿತರು ಅಡುಗೆ ಸಹಾಯಕಿಯರಾಗಿದ್ದಾರೆ ಎನ್ನುವ ಕಾರಣಕ್ಕೆ ಬಿಸಿಯೂಟಕ್ಕೆ ತಮ್ಮ ಮಕ್ಕಳನ್ನು ಕಳುಹಿಸದೇ ಇರುವ ಪೋಷಕರು ಸ್ಪಷ್ಟವಾಗಿ ಸಂವಿಧಾನದ ವಿರೋಧಿಗಳಾಗುತ್ತಾರೆ. ಅವರ ವಿರುದ್ಧ ದೇಶದ್ರೋಹದ ಆರೋಪವನ್ನೂ ಹೊರಿಸಬಹುದು.

ಸರ್ಕಾರ ಈ ತರಹದ ಘಟನೆಗಳನ್ನು ಲಘುವಾಗಿ ನೋಡಬಾರದು. ಹಳ್ಳಿಗಳಲ್ಲಿ ಜಾತಿ ಸಾಮರಸ್ಯವನ್ನು ಕಾಪಾಡಬೇಕು ನಿಜ. ಆದರೆ ಎಲ್ಲದಕ್ಕೂ ಒಂದು ಮಿತಿಯಿದೆ. ಅಸ್ಪೃಶ್ಯತೆಯ ಆಚರಣೆ ಮನುಷ್ಯತ್ವದ ವಿರುದ್ಧದ ಘೋರ ಅಪರಾಧ. ಮನವೊಲಿಕೆಯ ಬಳಿಕವೂ ತಮ್ಮ ಮೇಲ್ಜಾತಿ ಹಿರಿಮೆಯನ್ನು ಸಾಧಿಸಹೊರಡುವ ಪೋಷಕರನ್ನು ಬಂಧಿಸಿ ಕ್ರಿಮಿನಲ್ ಮೊಕದ್ದಮೆ ಹೂಡಬೇಕು. ಇನ್ನು ಮುಂದೆ ಇಂತಹ ಘಟನೆಗಳು ಮರುಕಳಿಸಿದರೆ, ಬಿಸಿಯೂಟ ಜಾರಿಯ ಜವಾಬ್ದಾರಿ ಹೊತ್ತಿರುವ ಜಿಲ್ಲಾ ಪಂಚಾಯ್ತಿ ಸಿಇಒ ಕೂಡಾ ಇದಕ್ಕೆ ಹೊಣೆ ಎಂದು ಪರಿಗಣಿಸಬೇಕು.

■ ಬಿ.ಎಂ.ಹನೀಫ್

